**ಸಾಕ್ಷಿಯನ್ನು ದಿಃ 04.07.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ವಿ.ಪಿ ವಕೀಲರಿಂದಃ</u>**

ವಾದಿಗಳ ರಾಜಶೆಟ್ಟಿ 2-3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ವಾದಿಗಳ ತಂದೆ ಯಾವ ಕಾರಣದಿಂದ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಮಧ್ಯಪಾನ ಚಟದಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ತಾಯಿ ನಾವು ಜಮೀನು ಖರೀದಿಸುವ 2 ವರ್ಷಗಳ ಮುನ್ನವೇ ಮರಣ ಹೊಂದಿರುತ್ತಾರೆ. ನಾನು ಜಮೀನು ಖರೀದಿ ಮಾಡುವುದಕ್ಕಾಗಿ ವಾದಿಗಳ ಬಳಿ ಹೋದಾಗ, ಅವರ ಚಿಕ್ಕಪ್ಪ ನಾಗರಾಜು ಮತ್ತು ವಾದಿಗಳ ತಂದೆ ರಾಜಶೆಟ್ಟಿ ಜೊತೆ ಮಾತುಕತೆ ಮಾಡಿರುತ್ತೇನೆ. ಆ ಸಮಯದಲ್ಲಿ ವಾದಿಗಳು 7 ಮತ್ತು 8 ನೇ ತರಗತಿಯಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದ ವಿಚಾರ ತಿಳಿದುಬಂದಿರುತ್ತದೆ. ವಾದಿಗಳ ತಾಯಿ ಮರಣದ ನಂತರ ವಾದಿಗಳಿಗೆ 1 ನೇ ಪ್ರತಿವಾದಿ ಯಾವುದೇ ವಿದ್ಯಾಭ್ಯಾಸವನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾದಿಗಳ ತಾಯಿ ಮರಣಹೊಂದಿದ ನಂತರ 1 ನೇ ವಾದಿ ಎಸ್.ಎಸ್.ಎಲ್.ಸಿ ಮುಗಿಸಿ ಪಿ.ಯು.ಸಿ ಗೆ ಹೋಗುತ್ತಿದ್ದು, ಅದನ್ನು ಮುಂದುವರೆಸಲು ಆಗಲಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿ 8 ನೇ ತರಗತಿವರೆಗೆ ತನ್ನ ವಿದ್ಯಾಭ್ಯಾಸ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳ ತಾಯಿ ಮರಣಹೊಂದಿದ್ದ ನಂತರ 1 ನೇ ಪ್ರತಿವಾದಿ ವಾದಿಗಳನ್ನು ಪಾಲನೆ ಪೋಷಣೆ ಮಾಡಿರುವುದಿಲ್ಲ ಮತ್ತು ವಿದ್ಯಾಭ್ಯಾಸ ನೀಡಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಮದ್ಯಪಾನ ಮತ್ತು ಜೂಜಾಟದ ಚಟ ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ದುಶ್ಚಟಗಳನ್ನು ಬಳಸಿಕೊಂಡು ನಾನು ನಿಡಿ–1 ಕ್ರಯಪತ್ರವನ್ನು ಅಕ್ರಮವಾಗಿ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ ನಿಡಿ–1 ರ ಪ್ರತಿಫಲದ ಹಣವನ್ನು 1 ನೇ ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 4 ನೇ ಸ್ವತ್ತು, ವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ಅದು 1 ನೇ ಪ್ರತಿವಾದಿ ಖರೀದಿ ಮಾಡಿದ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತು 1 ನೇ ಪ್ರತಿವಾದಿಗೆ ಅವರ ಅಣ್ಣ–ತಮ್ಮಂದಿರ ನಡುವೆ ನ್ಯಾಯಾಲಯದಿಂದ ವಿಭಾಗವಾಗಿ ಬಂದಿರುತ್ತದೆ. ಅದರ ಸ.ನಂ.25/2 ಆಗಿರುತ್ತದೆ. ಆ ಸ.ನಂ. ನಲ್ಲಿ 10.8 ಗುಂಟೆ ಖರೀದಿ ಮಾಡಿರುತ್ತೇನೆ. ಸದರಿ ಸ್ವತ್ತು 1 ನೇ ಪ್ರತಿವಾದಿಗೆ ತನ್ನ ತಂದೆಯಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತಾಗಿರುವುದರಿಂದ 1 ನೇ ಪ್ರತಿವಾದಿಗೆ ಅದನ್ನು ಮಾರಾಟ ಮಾಡುವ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ–1 ವಾದಿಗಳ ಹಕ್ಕಿಗೆ ಬದ್ಧತೆಯುಂಟು ಮಾಡುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೂ ಹಿಸ್ಸಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ವಾದಿಗಳು ಯಾವುದೇ ಹೊಸಮನೆಯನ್ನು ನಿರ್ಮಾಣ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗಳು ಈಗಲೂ ತನ್ನ ಚಿಕ್ಕಪ್ಪನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸದರಿ ಹೊಸಮನೆಯು ವಾದಿಗಳ ಚಿಕ್ಕಪ್ಪ ನಾಗರಾಜು ಮನೆಯಲ್ಲಿರುತ್ತದೆ. ಆ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯು ಕಳೆದ 7–8 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ

ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೂ ಸಹ ಅಲ್ಲಿ ಇಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಗಳ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಡಿ-1 ನ್ನು ಸೃಷ್ಟಿ ಮಾಡಿ, ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 1 ನೇ ಪ್ರತಿವಾದಿಯು ಮಾರಾಟ ಮಾಡಿರುವ 10.8 ಗುಂಟೆ ಜಮೀನು ಯಾವುದೇ ಕಾನೂನುಬದ್ದ ಉದ್ದೇಶಕ್ಕೆ ಮತ್ತು ವಾದಿಗಳ ಪಾಲನೆ ಪೋಷಣೆಗಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ದೀಪು.ಬಿ.ಸಿ)**
**2 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**